ಕವಿತೆ



## ಶರೀಫ್ ಹಸಮಕಲ್

ಕಲೆ: ವಿ.ಎಂ. ಮಂಜುನಾಥ್



# ಸೂರ್ಯನ ಕ್ಷಮಾ ಪತ್ರ

ಅರೆಕ್ಷಣ ತಬ್ಬಿಬ್ಬಾಗಿ
ಕುದಿಯುವ ಬೆವರಲ್ಲಿ ಮೂಡಿದ
ಅವ್ವನ ಸೆರಗಿಗಂಟಿದ ಚಿತ್ರಕ್ಕೆ
ಸೂರ್ಯ ಕೊಡುವ ಸನ್ನೆಯಿಂದಲೇ
ಕಣ್ಣು ಪಿಳುಕಿಸಲು ಹವಣಿಸುವ ಚಂದ್ರ
ಅಳುಕುತ್ತಲೇ ಹೊರಬಂದ

ಹಕ್ಕಿ ಪಕ್ಕಿ ಬಾನಚ್ಚು ನೆಕ್ಕಿ
ಚುಕ್ಕಿ ಚಿತ್ತಾರ ಮಾಯವಾಗುವ ಮೊದಲೇ
ಕೊರಗು ಕೊರೆಯುತ್ತಿರುವಾಗ
ಅಲ್ಲಲ್ಲ
ಅದೊಂದು ಸದಾ ಜೀವಂತ ತಳಮಳ
ನೆಲದೆದೆಗೆ ಬೆಳಕು ಚುಂಬಿಸಲು
ಭಯದ ಬೆಂಕಿ ಧಗಧಗಿಸಿ
ಥಕಥಕ ಕುಣಿಯುತ್ತಲೇ ಹೊರ ಬರುವ
ತನ್ನ ಮೈ ತಾನೇ ಸುಟ್ಟುಕೊಳ್ಳುವ ಸೂರ್ಯ
ಬಣ್ಣವಿಲ್ಲದ ಬೆವರಿಗೆ ಎಂಥಾ ಸುಗಂಧ
ಕರಗದ ಕೆಂಪು ಇಬ್ಬನಿಗೆ ಎಂಥಾ ಗಾಯ

ಪಾಪ ಪುಣ್ಯದ
ಲೆಕ್ಕಕೂಡಿ ಕಳೆಯುವ ದೇವರು
ಹಸಿವು ಧಾರಾಳವಾಗಿ ಗುಣಿಸೇ ಗುಣಿಸುವ
ಅಕ್ಷರ ಬೀಜ ಮೊಳಕೆಯೊಡೆಯದೇ
ಹೂವು ಹಾಸಿಗೆ ಹಾವಾಗಿ
ಮತ್ತೆ ಮತ್ತೆ ತನ್ನ ಮೈ ತಾ ಸುಟ್ಟುಕೊಳ್ಳುವ
ಸೂರ್ಯ



ಕೊರಳ್ಯಾವುದೋ ಕರುಳ್ಯಾವುದೋ
ತಿಳಿಯದೆ ಇರಿಯುವ ಅಸ್ತ್ರವೇ
ಅಲಂಕಾರವಾಗಿರುವಾಗ
ಹಕ್ಕಿಗಾಗಿ ಕೂಗುವ ಕೂಗುಗಳು
ಒಂದೇ ಸಮನೆ ಬಿಕ್ಕುತ್ತವೆ
ಹರಿಯುವ ಕಪ್ಪು ರಸ್ತೆಯಲ್ಲಿ ಕೆಂಪು ಜಲ
ತೇಲುವ ಅಸಂಖ್ಯಾತ ದೇಹಗಳು

ತಿನ್ನುವ ತುತ್ತಿನಲ್ಲೂ
ಪ್ರತಿಶತ ಶೇಕಡಾ ಸರಳಬಡ್ಡಿ ಲೆಕ್ಕಾ ಪಕ್ಕ
ಗೆದ್ದು ಬೀಗುವ ಕಸರತ್ತಿಗೆ.
ಸೂರ್ಯ ಮುಳುಗಿ ಹೋಗುವ ಮೊದಲೇ
ರಿಲೇ ಆಟ ಓಟ
ಓಡಲು ಮುಂದಾದ ಚಂದ್ರನಿಗೆ
ಕ್ಷಮಾ ಪತ್ರ.